# ಅಕ್ಕಮಹಾದೇವಿಯವರ “ಇ”, “ಈ” ಅಕ್ಷರದ ವಚನದ ಅರ್ಥ

1)ಇಂದ್ರಿಯ ಬಿಟ್ಟು ಕಾಯವಿರದು. ಕಾಯ ಬಿಟ್ಟು ಇಂದ್ರಿಯವಿರದು.

ಎಂತು ನಿ:ಕಾಮಿಯೆಂಬೆ ಎಂತು ನಿರ್ದೋಷಿಯೆಂಬೆ. ನೀನೊಲಿದರೆ ಸುಖಿಯಾಗಿಪ್ಪೆ ನೀನೊಲ್ಲದಿರೆ ದುಖಿಯಾಗಿಪ್ಪೆ ಚೆನ್ನಮಲ್ಲಿಕಾರ್ಜುನಯ್ಯ.

ಪದಗಳ ಅರ್ಥ

ನಿ:ಕಾಮಿ - ಕಾಮವಿಲ್ಲದವನು. ಇಚ್ಛಾ ಇಲ್ಲದವನು. ನಿರ್ದೋಷಿ- ದೋಷವಿಲ್ಲದವನು.

ವಚನದ ಅರ್ಥ

ಇಂದ್ರಿಯ ಬಿಟ್ಟು ಕಾಯವಿರದು. ಕಾಯಬಿಟ್ಟು ಇಂದ್ರಿಯ ವಿರದು, ಎಂತು ನಿ:ಕಾ ಮಿಯೆಂಬೆ ಎಂತು ನಿರ್ದೋಷಿಯೆಂಬೆ. ಇಂದ್ರಿಯಗಳು ಎಂದರೆ ಪಂಚ ಜ್ಞಾನೇದ್ರಿಯಗಳು . ಇವು ಶರೀರಬಿಟ್ಟು ಇರಲಾರವು. ಶರೀರವಾದರೂ ಇಂದ್ರಿಯ ಬಿಟ್ಟು ಇರಲಾರದು . ಶರೀರ ಇಂದ್ರಿಯಗಳು ವಿಷಯವಿಲ್ಲದೆ ಬದುಕಲಾರವು. ಎಂದಮೇಲೆ ಹೇಗೆ ಕಾಮವಿಲ್ಲದೆ ಇರಲು ಸಾಧ್ಯ? ಈಎಲ್ಲ ಇಂದ್ರಿಯಗಳು ಆಶೆ, ಅಪೇಕ್ಷೆ ಹೊಂದಿವೆ. ಅಂದಮೇಲೆ ನಾವು ದೋಷಮುಕ್ತರಾಗಿರಲು ಸಾಧ್ಯವಿಲ್ಲ. ನೀನೊಲಿದರೆ ಸುಖಿಯಾ ಗಿಪ್ಪೆ. ನೀನೊಲ್ಲದಿರೆ ದುಃಖಿಯಾಗಿಪ್ಪ. ನೀನು ಒಲಿದರೆ ನಮಗೆ ಸುಖಿ ನೀನು ಒಲಿಯ ದಿದ್ದರೆ ದುಃಖ . ಇದು ದೇಹ,ಇಂದ್ರಿಯ ಸಂಬಂಧ ಹೇಳುವ ವಚನ. ಇಂದ್ರಿಯ ಉಳಿದು ದೇಹ ಇಲ್ಲ. ದೇಹವುಳಿದು ಇಂದ್ರಿಯವಿಲ್ಲ. ಎರಡು,ಮೂರು ಇಂದ್ರಿಯವಿಲ್ಲದೆ ದೇಹವಿರಬಲ್ಲದು, ಆದರೆ ದೇಹವೆ ಇಲ್ಲದೆ ಇರಲಾಗದು. ಹಾವಿಗೆ ಕಿವಿ ಇಲ್ಲ. ಕಾಲುಗಳಿಲ್ಲ. ಕೈಗ ಇಲ್ಲ. ಹೀಗೆ ಲಕ್ಷಾಂತರ' ಕೀಟಗಳಿಗೆ ಕಣ್ಣು, ಕಿವಿ ಇರುವುದೆ ಇಲ್ಲ. ಮನುಷ್ಯ ಪೂರ್ಣ ನಾಗಬೇಕಾದರೆ ಐದು ಇಂದ್ರಿಯಗಳು ಬೇಕು. ಹೀಗಿದ್ದಮೇಲೆ ಮನುಷ್ಯನು ನಿಃಕಾ ಮಿಯೂ ನಿರ್ದೋಷಿಯೂ ಆಗಿರಲು ಸಾಧ್ಯವೇ ಇಲ್ಲ. ದೇಹದ ಗುಣಗಳು ಆಶೆ, ಆಮಿಷಕ್ಕೊಳಗಾಗುವುದು. ದೇಹ ಬದುಕಬೇಕಾದರೆ ಅನ್ನ, ವಿಷಯಗಳು ಬೇಕು. ಪೋಷಣೆಯಿಲ್ಲದೆ ದೇಹ ಬದುಕದು. ಈ ಪೋಷಣೆಗಾಗಿ ಮನುಷ್ಯ ಆಶೆ ಆಮಿಷಗಳಿಗೆ ಒಳಗಾಗುತ್ತಾನೆ. ಈದೇಹವು ಬೇಕು ಬೇಕು ಎನ್ನುವ ಹಸಿವನ್ನು ಅನಂತವಾಗಿ ಮನುಷ್ಯನ ಮುಂದೆ ಇಡುತ್ತ ಹೋಗುತ್ತದೆ. ಹಸಿವು ತೃಪ್ತವಾದಾಗ ದೇಹ ಕ್ಷಣಕಾಲಸಾಕು ಎನ್ನುತ್ತದೆ . ಆಗ ಇಂದ್ರಿಯಗಳು ಇನ್ನೊಂದು ಬೇಕು ಎಂದು ಬೇಡತೊಡಗುತ್ತವೆ. ಹೀಗೆ ದೇಹೇಂದ್ರಿಯ ಇರುವವರೆಗೆ ಹಸಿವು ತೃಷೆರಾಗಾದಿ ಭಾವಗಳು ಅನಂತವಾಗಿ ಕಾಡುತ್ತವೆ.ಇದು ಇಂದ್ರಿಯಗಳ ಗುಣಸ್ವಭಾವ. ಹೀಗಿದ್ದಮೇಲೆ ನಿರ್ದೋಷಿ, ನಿಃಕಾ ಮಿಯಾಗುವುದಾದರೂ ಹೇಗೆ?ಪರಮಾತ್ಮನೆ ನೀನೊಲಿದರೆ ಸುಖಿಯಾಗಿರುವೆನು. ನೀನೊಲ್ಲದಿರೆ ದುಃಖಿಯಾಗಿರುವೆನು. ಚೆನ್ನಮಲ್ಲಿಕಾರ್ಜುನನಲ್ಲಿ ಅನುಗ್ರಹ ಬೇಡುತ್ತಿರುವ ರೀತಿ ಇದು. ಇಷ್ಟೊಂದು ಕಷ್ಟವಾದ ದೇಹೇಂದ್ರಿಯಗಳನ್ನು ಗೆದ್ದಿದ್ದೇನೆ .ಇನ್ನಾದರೂ ನೀನು ಅನುಗ್ರಹಿಸು. ಅಕ್ಕನವರ ಸಾಧನೆ ತುಂಬ ದೊಡ್ಡದು.

2)ಇಂದ್ರನೀಲಗಿರಿಯ ನೇರಿಕೊಂಡು

ಚಂದ್ರಕಾಂತ ಶಿಲೆಯ ಮೆಟ್ಟಿಕೊಂಡು

ಕೊಂಬು ಬಾರಿಸುತ ಹರನೇ ಎಂದಿಪ್ಪೆನೋ

ಎನ್ನ ಕುಂಭ ಕುಚದ ಮೇಲೆ ನಿಮ್ಮ ನೆಂದಪ್ಪಿಕೊಂಬೆನಯ್ಯ. ಅಂಗಭಂಗ ಮನಭಂಗವಳಿದು ನಿಮ್ಮನೆಂದಿಗೆ ನೆರೆವೆನೋ ಚೆನ್ನಮಲ್ಲಿಕಾರ್ಜುನಾ.

ಪದಗಳ ಅರ್ಥ

ಇಂದ್ರನೀಲಗಿರಿ-ಇಂದ್ರಕೀಲ ಪರ್ವತ. ಪೂರ್ವದಿಕ್ಕಿನ ಬೆಟ್ಟ. ಚಂದ್ರಕಾಂತಶಿಲೆ-ಪ್ರತಿ ಫಲನಮಾಡುವ ಶಿಲಾಪೀಠ, ಶಿವನಕೈಲಾಸದ ಪೀಠ,

ಕೊಂಬು- ಒಂದುಮಂಗಳವಾದ್ಯ.ಬೋನಾಸಿ, ತುತ್ತೂರಿ, ಕಹಳೆ ತರಹದ ಮಂಗಳವಾದ್ಯ.

ಬಾರಿಸು-ಊದು.

ಅಂಗ ಭಂಗ -ಅಂಗವು ಲಟಲಟ ಮುರಿದುಹೋಯಿತೆನ್ನುವಷ್ಟು ಶಿವನ ಅಪ್ಪುಗೆ.

ಮನಭಂಗ- ರತಿಭೋಗದ ಪರಿಣಾಮ ಸುಖ.

ನೆರೆ- ಒಂದುಗೂಡು. ಕಾಯಭೋಗ.

ವಚನದ ಅರ್ಥ

ಇಂದ್ರನೀಲದ ಗಿರಿಯನೇರಿಕೊಂಡು ಚಂದ್ರಕಾಂತ ಶಿಲೆಯ ಮೆಟ್ಟಿಕೊಂಡು. ಪೂರ್ವದ ಇಂದ್ರಕೀಲ ಪರ್ವತವನ್ನೇರಿ, ಚಂದ್ರಕಾಂತ ಶಿಲೆಯ ಮೇಲೆ ನಿಂತು. ಅಂದರೆ ಹಿಮಾಲಯದ ಕೈಲಾಸಪರ್ವತವನ್ನೇರಿ ಶಿವನ ಪೀಠದಮೇಲೆ ಅವನ ಅರ್ಧಾಂಗಿನಿಯಾಗಿರುತ್ತ, ಕೊಂಬು ಬಾರಿಸುತ ಹರನೇಎಂದಿಪ್ಪೆನೋ ಅಲ್ಲಿ ನಾನು ನಿನ್ನ ಪ್ರೀತಿಯ ವಧು ನಾನು ಬಂದಿದ್ದೇನೆ ಎಂದು ಮಂಗಳವಾದ್ಯ ನುಡಿಸುತ್ತ ನಿನ್ನ ಪ್ರೀತಿ ಪಡೆಯುವ ಭಾಗ್ಯ ನನಗೆ ಎಂದು ದೊರೆವುದೋ? ಎನ್ನ ಕುಂಭಕುಚದಮೇಲೆ ನಿಮ್ಮನೆಂದಪ್ಪಿಕೊಂಬೆನಯ್ಯ. ನನ್ನ ತುಂಬುಕೊಡದಎದೆಯಮೇಲೆ ನಿಮ್ಮನ್ನು ನಾನು ಯಾವಾಗ ಅಪ್ಪಿಕೊಳ್ಳುತ್ತೇನೆ. ಅಂಗಭಂಗ ಮನಭಂಗವಳಿದು ನಿಮ್ಮನೆಂದಿಗೆ ನೆರೆವೆನೋ ಚೆನ್ನಮಲ್ಲಿಕಾರ್ಜುನಾ. ಅಂಗಮನಭಾವಗಳು ನಿನ್ನಲ್ಲಿ ಲಯವಾಗಿ ,ಕರಗಿ

ನಿನ್ನಲಿ ರತಿಭೋಗ ಪರಿಣಾಮಸುಖವನ್ನು ನಾನು ಎಂದು ಹೊಂದುವೆನೋ ಚೆನ್ನ ಮಲ್ಲಿಕಾರ್ಜುನ ಪರಮಾತ್ಮನೆ. ದೇಹಭೋಗದ ತುರೀಯಸುಖವನ್ನು ಹೊಂದಲು ಚೆನ್ನಮಲ್ಲಿಕಾರ್ಜುನದೇವರಿಗಾಗಿ ಕಳವಳಿಸಿದ್ದಾರೆ. ನಾನು ಕೈಲಾಸ ಪರ್ವತ ಏರ ಬೇಕು. ಅಲ್ಲಿ ಶಿವನು ಮಂಡಿತನಾಗುವ ಶಿಲಾಪೀಠದಮೇಲೆ ನಿಲ್ಲಬೇಕು. ಲೋಕಕ್ಕೆಲ್ಲ ನಾನು ಶಿವನ ವಧುವಾದೆ ಎಂದು ಕೊಂಬಿನ ಮಂಗಳವಾದ್ಯ ಮೊಳಗಬೇಕು. ಶಿವನ ಅರ್ಧಾಂಗಿನಿಯಾಗಿ

ಆತನ ಜೊತೆ ಪ್ರಥಮರಾತ್ರಿಯನ್ನು ರತಿಭೋಗದಲ್ಲಿ ನನ್ನ ಅಂಗಮನಭಾವಗಳು ತೃಪ್ತಿಹೊಂದುವಷ್ಟು ನಾನು ಲೀನವಾಗಬೇಕು. ಇದು ಅವರ ಉತ್ಕಟ ಅಪೇಕ್ಷೆ. ದೇಹ,ಮನ, ಭಾವಗಳು ವೈಭವದಭೋಗಕ್ಕೆ ಕಾತರಿಸಿವೆ.

3) ಇಂದೆನ್ನ ಮನೆಗೆ ಗಂಡ ಬಂದಹನೆಲೆಗವ್ವಾ.

ನಿಮನಿಮಗೆ ಶೃಂಗಾರವ ಮಾಡಿಕೊಳ್ಳಿರಿ. ಚೆನ್ನಮಲ್ಲಿಕಾರ್ಜುನನೀಗಳ ಬಂದಹನು. ಇದಿರುಗೊಳ್ಳ ಬನ್ನಿರಿ ಅಪ್ಪಗಳಿರಾ.

ಇಂದೆನ್ನ ಮನೆಗೆ ಗಂಡ ಬಂದಹನೆಲೆಗವ್ವಾ. ನಿಮನಿಮಗೆ ಶೃಂಗಾರವ ಮಾಡಿ ಕೊಳ್ಳಿರಿ.

ವಚನದ ಅರ್ಥ

ಈದಿನ ನನ್ನ ಮನೆಗೆ ಗಂಡ ಬರುವವನಿದ್ದಾನೆ . ಏ ಅವ್ವಗಳಾ ನೀವು ನಿಮ ನಿಮಗೆ ಅಲಂಕಾರ ಮಾಡಿಕೊಳ್ಳಿರಿ. ಮಹಾದೇವಿಯವರು ಗೆಳತಿಯರಿಗೆ, ಗೃಹಿಣಿಯರಿಗೆ ಹೇಳುತ್ತಿದ್ದಾರೆ. ಚೆನ್ನಮಲ್ಲಿಕಾರ್ಜುನನೀಗಳ ಬಂದಹನು. ಇದಿರುಗೊಳ್ಳ ಬನ್ನಿರಿ ಅಪ್ಪಗಳಿರಾ, ನನ್ನ ಗಂಡ ಚೆನ್ನಮಲ್ಲಿಕಾರ್ಜುನನು ಈ ಕ್ಷಣ ಬಂದು ಬಿಡು ತ್ತಾನೆ, ತಂದೆಗಳೆ ಬನ್ನಿರಿ. ಇದಿರುಗೊಂಡು ಸ್ವಾಗತಿಸಬೇಕು ಬನ್ನಿರಿ. ವಧು ತಾನೆ ಸಡಗರದಿಂದ ಗಂಡನನ್ನು ಮನೆ ದುಂಬಿಸಿಕೊಳ್ಳುವ ಕಾರಭಾರ ನಡೆಸಿದ್ದಾರೆ. ಹಿರಿಯರು ಮಾಡಬೇಕಾದ ಜವಾಬ್ದಾರಿಯನ್ನು ಹೆಣ್ಣು ಮಗಳೆ ನಿರ್ವಹಿಸಿ ಮಾತ ನಾಡುತ್ತಿರುವುದನ್ನು ಸ್ತ್ರೀ ವಾದಿಗಳು, ಸ್ತ್ರೀಚಳುವಳಿ ನಡೆಸುವವರು ಗಮನಿಸಬೇಕು. ಮಹಾದೇವಿಯವರು ಮದುವೆಯ ಎಲ್ಲ ವಿವರಗಳನ್ನು ವಿಸ್ತಾರವಾಗಿ ವಿವರಿಸುತ್ತಾರೆ. ಚೆನ್ನಮಲ್ಲಿಕಾರ್ಜುನನೊಂದಿಗೆ ಮದುವೆ ಮಾತು ಎಂದರೆ ಅದೇನು ಹಿಗ್ಗು. ಅದೇನು ಸಡಗರ. ಇದು ಕೇವಲ ವಚನದಲ್ಲಿ ಮಾತ್ರ ಕಾಣಬಂತು. ವಾಸ್ತವ ಬೇರೆ.

ಮದುವೆ ಗಂಡನ್ನು ಮನೆ ದುಂಬಿಸಿಕೊಳ್ಳುವ ಕಾರ್ಯವನ್ನು ಈ ವಚನ ಹೇಳುತ್ತದೆ. ವಧುವಾಗಿ ಮದುವೆ ಕಾಯವನ್ನು ತಾನೆ ನಿರ್ವಹಿಸಿಕೊಳ್ಳಬೇಕಾದ ಸ್ಥಿತಿ ಅಕ್ಕನವರದು. ಲೌಕಿಕದ ಲಗ್ನದ ಕಾಲಕ್ಕೆ ಬಂಧುಗಳು, ಗೆಳತಿಯರಾದಿಯಾಗಿ ಎಲ್ಲ ನೆರೆ ಯುತ್ತಾರೆ. ಆದರೆ ಅನುಭಾವ ಲಗ್ನಕ್ಕೆ ತಿರುಗಿ ನೋಡುವರೇ ಇರುವುದಿಲ್ಲ. ಅದರಲ್ಲೂ ಧೀರ ವೈರಾಗ್ಯ ಬಂದವರ ಕಡೆ ಯಾರೂ ತಿರುಗಿ ನೋಡುವುದಿಲ್ಲ. ಇಂತಹ ಸ್ಥಿತಿಯಲ್ಲಿ ಅನುಭಾವದ ಲಗ್ನ ಅಕ್ಕನವರು ತಾವೆ ನೆರವೇರಿಸಿಕೊಳ್ಳುತ್ತಿದ್ದಾರೆ.

3)ಇಹಕ್ಕೊಬ್ಬ ಗಂಡನೆ ಪರಕ್ಕೊಬ್ಬ ಗಂಡನೆ? ಲೌಕಿಕಕ್ಕೊಬ್ಬ ಗಂಡನೆ ಪರಮಾರ್ಥಕ್ಕೊಬ್ಬ ಗಂಡನೆ?

ಎನ್ನ ಗಂಡ ಚೆನ್ನಮಲ್ಲಿಕಾರ್ಜುನ ದೇವರಲ್ಲದೆ ಮಿಕ್ಕಿನ ಗಂಡರೆಲ್ಲ ಮುಗಿಲ ಬೊಂಬೆಯಂತೆ.

ವಚನದ ಅರ್ಥ

ಇಹಕ್ಕೊಬ್ಬ ಗಂಡನೆ ಪರಕ್ಕೊಬ್ಬ ಗಂಡನೆ. ಲೌಕಿಕಕ್ಕೊಬ್ಬ ಗಂಡನೆ ಪರ ಮಾರ್ಥಕ್ಕೊಬ್ಬ ಗಂಡನೆ? ಭೂಲೋಕಕ್ಕೊಬ್ಬ ಗಂಡ ದೇವಲೋಕಕ್ಕೊಬ್ಬ ಗಂಡನೆ ಸಂಸಾರ ಮಾಡುವುದಕ್ಕೊಬ್ಬ ಗಂಡ. ಪರಮಾತ್ಮನನ್ನು ಸಾಧಿಸುವುದಕ್ಕೊಬ್ಬ ಗಂಡನೆ? ಎನ್ನ ಗಂಡ ಚೆನ್ನಮಲ್ಲಿಕಾರ್ಜುನ ದೇವರಲ್ಲದೆ ಮಿಕ್ಕಿನ ಗಂಡರೆಲ್ಲ ಮುಗಿಲ ಬೊಂಬೆಯಂತೆ. ನನಗೆ ಚೆನ್ನಮಲ್ಲಿಕಾರ್ಜುನನೆ ಗಂಡ. ಉಳಿದ ಗಂಡುಗಳು ಮೋಡದಲ್ಲಿ ಉಂಟಾದ ಬೊಂಬೆಯಂತೆ. ಮೋಡದಲ್ಲಿ ಆಕಾರಗೊಂಡ ಬೊಂಬೆಗಳು ಈ ಕ್ಷಣ ಇರುತ್ತವೆ ಇನ್ನೊಂದು ಕ್ಷಣಕ್ಕೆ ಅಳಿಸಿ ಹೋಗುತ್ತವೆ. ನಶ್ವರವಾದ ಈ ಗಂಡುಗಳು ನನಗೆ ಬೇಡ. ಚಿರಂತನವಾದ ಪರಮಾತ್ಮನೆ ನನ್ನ ಗಂಡ. ಸಂಸಾಕ್ಕೂ ಪರಮಾತ್ಮ. ಪರಮಾನುಭಾವಕ್ಕೂ ಪರಮಾತ್ಮ.ಲೌಕಿಕಕ್ಕೂ ಪರಮಾತ್ಮ ಅಲೌಕಿಕಕ್ಕೂ ಪರಮಾತ್ಮ. ಚೆನ್ನಮಲ್ಲಿಕಾರ್ಜುನದೇವರೆ ನನ್ನ ಗಂಡ. ಒಡೆಯ. ಲಗ್ನ ಮಾಡಿಕೊ ಎಂದು ಒತ್ತಾಯ ಹಾಕಿದ ಗೆಳತಿಯರಿಗೆ, ತಾಯಿತಂದೆಗಳಿಗೆ ಉತ್ತರ ಈ ವಚನ.

1. ಈಳೆ ಲಿಂಬೆ ಮಾವು ಮಾದಲಕ್ಕೆ ಹುಳಿನೀರನ್ನೆರೆದವರಾರಯ್ಯ? ಕಬ್ಬು, ಬಾಳೆ,ಹಲಸು,ನಾರಿವಾಳಕ್ಕೆ ಸಿಹಿನೀರನ್ನೆರೆದವರಾರಯ್ಯ? ಕಳವೆರಾಜಾನ್ನಶಾಲ್ಯಾನ್ನಕ್ಕೆ ಒಗರದ ಉದಕವನೆರೆದವರಾರಯ್ಯ?

ಮರುಗ ಮಲ್ಲಿಗೆ ಪಚ್ಚೆ ಮುಡಿವಾಳಕ್ಕೆ ಪರಿಮಳದುದಕವನೆರೆದವರಾರಯ್ಯ?

ಇಂತೀ ಜಲ ಒಂದೆ ನೆಲ ಒಂದೆ ಆಕಾಶ ಒಂದೆ .  ತನ್ನಪರಿಬೇರಾಗಿಹ ಹಾಗೆ, ಚೆನ್ನಮಲ್ಲಿಕಾರ್ಜುನಯ್ಯನು ಹಲವು ಜಗಂಗಳ ಕೂಡಿಕೊಂಡಿರ್ದರೇನು ತನ್ನ ಪರಿ ಬೇರೆ.

ಪದಗಳ ಅರ್ಥ

ಈಳೆ-ಎಳ್ಳಿಕಾಯಿ,

ನಾರಿವಾಳ-ಎಳನೀರು ತೆಂಗು,

ಪಚ್ಚೆ-ಒಂದು ವಿಧದ ಹೂವು,

ಮುಡಿವಾಳ- ಕಂಚುವಾಳದ ಹಾಗೆ ಒಂದು ಹೂವು,

ಕಳವೆ-ಬತ್ತ

ರಾಜಾನ್ನ-ಗೋಧಿ,

ಶಾಲ್ಯಾನ್ನ- ಜೋಳ, ರಾಗಿ,

ಒಗರ-ಅನ್ನ,

ಉದಕ-ನೀರು,.

ವಚನದ ಅರ್ಥ

ಈ ಸೃಷ್ಟಿಯನ್ನು ಬೆರಗು ಕಣ್ಣುಗಳಿಂದ ನೋಡಿದ ಅಕ್ಕನವರು ಅನಂತ ಸಸ್ಯ - ಸಂಕುಲಗಳಲ್ಲಿ ಜೀವ ಜಾಲದಲ್ಲಿ ಸೃಷ್ಟಿಯ ವಿಧವಿಧ ಛಾಪು ಒತ್ತಿರುವುದನ್ನು ಗುರುತಿಸಿ ಆನಂದಾತಿಶಯವನ್ನು ವ್ಯಕ್ತ ಮಾಡಿದ್ದಾರೆ. ಒಂದೊಂದು ಸೃಷ್ಟಿಯಲ್ಲೂ ಒಂದೊಂದು ವೈಶಿಷ್ಟ್ಯವಿದೆ. ಇದೆಲ್ಲ ಯಾರು ನಡೆಸಿದರು? ಹೇಗೆ ನಡೆಸಿದರು . ಈ ಶಕ್ತಿ ಯಾರಿಗಿದೆ. ಈ ಪ್ರಶ್ನೆಗಳನ್ನು ಹಾಕಿಕೊಂಡು ಈ ವಚನ ಹಾಡಿಕೊಂಡಿದ್ದಾರೆ. ಗಾಣುವ ಜಗತ್ತಿನಲ್ಲಿ ವಿಶಿಷ್ಟವಾದುದನ್ನು ಗುರುತಿಸುವ ಪ್ರತಿಭಾಶಕ್ತಿ ವಿಶೇಷವಾಗಿ ಅಕ್ಕನವರಲ್ಲಿರುವುದು ಈವಚನದಿಂದ ತಿಳಿಯುತ್ತದೆ. ಸಾಮಾನ್ಯರು ನೋಡಿ ಆನಂದ ಪಟ್ಟರೆ, ಕವಿಯ ಕಣ್ಣಿಂದ ನೋಡಿದ ಅಕ್ಕ ಅದನ್ನು ವಚನವಾಗಿ ಹಾಡಿಕೊಂಡಿದ್ದಾರೆ.

ಫಲವಾಗಿ ಭಾವಗೀತಾತ್ಮಕವಾದ ಶ್ರೇಷ್ಠ ಕವಿತೆಗಳು ಪ್ರಕಟವಾದವು.ಕುತೂಹಲ, ಬೆರಗು,ಸಂಗೀತ, ಸಾಹಿತ್ಯ, ಭಾಷಾ ಸೌಂದರ್ಯ ಎಲ್ಲವು ಇಲ್ಲಿ ಪ್ರಕಟವಾಗಿವೆ. ಈಳೆಲಿಂಬೆ ಮಾವು ಮಾದಲಕ್ಕೆ ಹುಳಿ ನೀರನ್ನೆರೆದವರಾರಯ್ಯ? ಪ್ರಶ್ನೆ, ಅದಕ್ಕೆ ಉತ್ತರದ ಹುಡುಕಾಟ, ಕುತೂಹಲ,ಸತ್ಯಾನ್ವೇಷಣೆಯ ದೃಷ್ಟಿ ಇಲ್ಲಿ ಹೊಳಹುಗೊಂಡಿವೆ. ನಾವು ನಿತ್ಯ ಸಸ್ಯ ಸಂಕುಲಗಳನ್ನು ನೋಡುತ್ತೇವೆ ಆದರೆ ಈಸ್ಪಷ್ಟಿಯ ಕಾಣದ ಕೈಯ್ಯನ್ನು ಹುಡುಕುವ ಪ್ರಯತ್ನ ಕುತೂಹಲ ನಮ್ಮಲ್ಲಿ ಪ್ರಕಟವಾಗಲಿಲ್ಲ. ಅಕ್ಕನವರಲ್ಲಿ ಅಪಾರ ಕುತೂಹಲ, ಹುಡುಕಾಟವಿದೆ. ಈ ಸಸ್ಯ ಸಂಕುಲಗಳಲ್ಲಿ ಎಷ್ಟೊಂದು ವೈವಿಧ್ಯ! ಎಷ್ಟೊಂದು ಫಲಗಳಿವೆ! ಎಷ್ಟೆಲ್ಲ ಸಿಹಿ, ಹುಳಿ, ಒಗರು, ಕಹಿ ಏನೆಲ್ಲ ವೈವಿಧ್ಯವಿದೆ. ಇವುಗಳಿಗೆ ಈ ಸಿಹಿ,ಹುಳಿ, ಒಗರು, ಕಹಿ ಏನೆಲ್ಲ ಶಕ್ತಿ ಕೊಟ್ಟ ವರು ಯಾರು?ಕಬ್ಬು ಬಾಳೆ,ಹಲಸುನಾರಿವಾಳಕ್ಕೆ ಸಿಹಿನೀರನ್ನೆರೆದವರಾರಯ್ಯ? ಅಲ್ಲಿ ಹುಳಿ . ಇಲ್ಲಿ ಸಿಹಿ ಒಂದೆಡೆ ಹುಳಿ.ಇನ್ನೊಂದೆಡೆ ಸಿಹಿ. ಇದು ಹೇಗೆ ಸಾಧ್ಯವಾಯಿತು?ಇದು, ಅದು ಇರುವುದು ಒಂದೇ ಭೂಮಿಯಲ್ಲಿ ಏನಾಶ್ಚರ್ಯ?ಕಬ್ಬು ಬಾಳೆ,ಹಲಸು,ತೆಂಗು ಬೆಳೆಯುವುದು ಇದೆ ಭೂಮಿಯಲ್ಲಿ ಇದೆ ಬಿಸಿಲು, ಇದೆ ಗಾಳಿ ಇದೆ ನೀರು, ಇದೆ ಆಕಾಶ. ಅಲ್ಲಿ ಹುಳಿ ಇಲ್ಲಿ ಸಿಹಿ. ಏನಾಶ್ಚರ್ಯ ಇದು ಹೇಗೆ ಸಾಧ್ಯ ವಾಯಿತು? ಈಹುಳಿ.ಸಿಹಿಗಳು ಎಲ್ಲಿಂದ ಬಂದವು. ಇದನ್ನು ಇಲ್ಲಿಗೆ ತಂದವರು ಯಾರು? ಮರುಗ,ಮಲ್ಲಿಗೆ ಪಚ್ಚೆ ಮುಡಿವಾಳ ಈ ಸಸ್ಯಗಳಿಗೆ ಪರಿಮಳದ್ರವ್ಯವನ್ನು ಎರೆದವರು ಯಾರು? ಒಂದೆಡೆ ಸಿಹಿ, ಹುಳಿ, ಇನ್ನೊಂದೆಡೆ ಪರಿಮಳ ಈ ಹೂ ಗಿಡುಗಳು ಹೇಗೆ ಪರಿಮಳ ಕೊಡುತ್ತವೆ. ಇವನ್ನು ಇವು ಎಲ್ಲಿಂದ ತಂದವು. ?ಕಳವೆ ರಾಜಾನ್ನ, ಶಾಲ್ಯಾನ್ನಕ್ಕೆ ಒಗರದ ಉದಕವನೆರೆದವರಾರಯ್ಯ? ಇದೀಗ ಇನ್ನೊಂದಾ ಶ್ಚರ್ಯ. ಈ ಪೈರುಗಳು ನಮಗೆ ಅನ್ನ ಕೊಡುತ್ತವೆ. ಇವುಗಳಿಗ ಈ ಅನ್ನ ಕೊಡುವ ಶಕ್ತಿ ಎಲ್ಲಿಂದ ಬಂತು. ನಮಗೆ ಇವು ಹಸಿವೆಗೆ ಅನ್ನ ಕೊಡುತ್ತವಲ್ಲ, ಈ ವ್ಯವಸ್ಥೆ ಮಾಡಿದವರು ಯಾರು? ಈ ಮನುಷ್ಯನಿಗೆ ಈ ಸಸ್ಯ ಸಂಕುಲಗಳು ಏನೆಲ್ಲ ಸುಖ, ಸಂಪತ್ತು ಕೊಡುತ್ತಿವೆ. ಇವು ಕೊಡದಿದ್ದರೆ ಮನುಷ್ಯನ ಬದುಕು ಎಷ್ಟು ಘೋರವಾಗುತ್ತಿತ್ತೊ?ಏನೊ? ಇವೆಲ್ಲವೂ ಈ ಸೃಷ್ಟಿಯಲ್ಲಿ ಕಾಣದ ಕೈನ ಇಚ್ಚೆಯನ್ನು ನೆರವೇರಿಸುತ್ತಿವೆ. ಇವು ಒಂದೆ ಜಲ, ಒಂದೆ ನೆಲ, ಒಂದೆ ಆಕಾಶದಲ್ಲಿವೆ ಆದರೂ ವೈವಿಧ್ಯ.ಇವುಗಳಲ್ಲಿ ಸ್ಥಾಯಿಯಾಗಿ ಎಲ್ಲ ಕಡೆ ಹರಿದಿರುವುದು ಒಂದೆ ನೀರು, ಒಂದೆ ಗಾಳಿ. ಒಂದೆ ಆಕಾಶ. ಪರಿಣಾಮ ಇಲ್ಲಿ ಹುಳಿ, ಅಲ್ಲಿ ಸಿಹಿ, ಒಂದೆಡೆ ಪರಿಮಳ ಇನ್ನೊಂದೆಡೆ ಅನ್ನ ಹಾಗೆ ಎನ್ನ ದೇವ ಚೆನ್ನಮಲ್ಲಿಕಾರ್ಜುನಯ್ಯನು ಈ ಜಗತ್ತಿನಲ್ಲಿ ತನ್ನ ಸೃಷ್ಟಿಯನ್ನು ಪ್ರಕಟಪಡಿಸಿದ್ದೂ ತನ್ನ ಶಕ್ತಿ ಸಾಮಾರ್ಥವನ್ನು ತೋರಿದ್ದೂ, ಈ ಜೀವ ಜಾಲದಲ್ಲಿ ತಾನಿದ್ದೂ ಇದೆಲ್ಲವನ್ನು ಮೀರಿ ನನ್ನ ಚೆನ್ನಮಲ್ಲಿ ಕಾರ್ಜುನನಿದ್ದಾನೆ. ಆತ ಹಲವು ಜಗತ್ತು ಕೂಡಿಕೊಂಡಿದ್ದೂ ತಾನು ತಾನೆ ತಾನಾಗಿ ಇದ್ದಾನೆ. ಅವನ ವಿಶೇಷತೆಯೆ ಬೇರೆ. ಪ್ರಪಂಚ ಕಂಡ ಮಹಾನ್ ಕಏಯತ್ರಿ ಅಕ್ಕಮಹಾ ದೇವಿ. ಜಗತ್ತಿನ ಮೊದಲ ಭಾವಗೀತಕಾರರು ಅಕ್ಕಮಹಾದೇವಿ, ಭಾವಗೀತ ಸಾಹಿತ್ಯ ಹತ್ತೊಂಬತ್ತನೆಯ ಶತಮಾನದಲ್ಲಿ ವರ್ಡವರ್ತ, ಕೀಟ್ಸ ಕೋಲರಿಜ್, ಷೆಲ್ಲಿ ಬೈರನ್ ಇತರ

ಇಂಗ್ಲೀಷ ಕವಿಗಳಿಂದ ಸೃಷ್ಟಿಯಾಯಿತು ಎಂದು ವಿದ್ವಾಂಸರು ಬರೆಯತ್ತಾರೆ. ಆದರೆ ಅಕ್ಕ ಮಹಾದೇವಿಯವರು ಹನ್ನೆರಡನೆಯ ಶತಮಾನದಲ್ಲಿಯೇ ಇಂತಹ ಭಾವಗೀತವನ್ನು ಸೃಷ್ಟಿಸಿದ್ದಾರೆ. ಅಕ್ಕಮಹಾದೇವಿಯವರು ಪ್ರಕೃತಿ ಪ್ರೇಮಿಯೂ ಹೌದು. ಅವರ ಒಂದೊಂದು ವಚನವೂ ಒಂದೊಂದು ಶ್ರೇಷ್ಠ ಭಾವಗೀತ. ನವೋದಯ ಸಾಹಿತ್ಯ 20ನೆಯ ತಮಾನದಲ್ಲಿ ಏನು ಪ್ರಕಟ ವಾಯಿತು, ಅದಕ್ಕೂ ಮೊದಲೆ ಅಕ್ಕಮಹಾದೇವಿ ಯವರಲ್ಲಿ ಈ ಪ್ರಕೃತಿ ಪದ್ಯಗಳು ಪ್ರಕಟವಾಗಿವೆ . ಭಾವಗೀತ ಪ್ರಕಾರಕ್ಕೆ ಮೊದಲ ಮತ್ತು ಸರ್ವ ಶ್ರೇಷ್ಠ ಬೆಳೆ ಆಕ್ಕಮಹಾದೇವಿಯವರ ವಚನಗಳು.ಅವರ ಅನೇಕ ವಚ ನಗಳ ವಸ್ತು ಪ್ರಕೃತಿ. ಇಲ್ಲಿ ಕುತೂಹಲ ,ಬೆರಗು,ಉತ್ಸಾಹ, ಗೌರವ ಸ್ಥಾಯೀ ಭಾವ. ಇಲ್ಲಿ ಶ್ರದ್ಧೆ, ಭಕ್ತಿ ಇವೆ. ಕುವೆಂಪು, ವರ್ಡ್ ವರ್ತ್ ಕವಿಗಳಲ್ಲಿ ಏನು ಪ್ರಕೃತಿ ಪ್ರೇಮವಿದೆ ಅದು ಕೇವಲ ಸಂಚಾರೀ ಭಾವ. ಆದರೆ ಅಕ್ಕನವರು ಈ ಪ್ರಕೃತಿ ಯಲ್ಲಿ ನೆಲೆ ಮಾಡಿಕೊಂಡು ನೆಲೆಸಿದರು. ಅದು ಕೇವಲ ಉದ್ಗಾರ ಉತ್ಸಾಹದ ಪದ್ಯವಲ್ಲ. ಅದು ಇಲ್ಲಿ ಜೀವನವೆ ಆಯಿತು. ಇದು ಋಷಿಯ ದೃಷ್ಟಿ ಇಲ್ಲಿ ದರ್ಶನ ವಿದೆ. ಹೊಸ ಅನುಭವ ಈವಚನಗಳನ್ನು ಓದಿದಾಗ ಹಾಡಿಕೊಂಡಾಗ ಎಂತಹವರಿಗೂ ಆಗುತ್ತದೆ. ಈ ವಚನಗಳಲ್ಲಿ ಇಂದಿಗು ತಾಜಾ ತಾಜಾ ಹೊಸತನ ಸ್ಪಂದನವಿದೆ. ನಿಸರ್ಗದ ಹಲವು ಪರಿ, ಅನಂತ ದರ್ಶನ ಇಲ್ಲಿದೆ.